ಸಂಗೀತ ಜಿ, ಭಾರತೀನಗರ

*ತುಂಬಾ ಮಾತನಾಡುವವರನ್ನು ಏನೆಂದು ಕರೆಯಬೇಕು?*




ಎಫ್‌ಎಂ ರೇಡಿಯೋ!

ದೀಪಕ್, ಕಂಬದಕೋಣೆ

*ಹೆಸರಿನಲ್ಲಿ ಎರಡು ಶಾಂತ ಇರುವ ಶಾಂತಕುಮಾರನ್ ಶ್ರೀಶಾಂತ ಕ್ರಿಕೆಟ್ ಅಂಗಣದಲ್ಲಿ ಕಿಡಿಕಾರುತ್ತಿರುತ್ತಾನಲ್ಲಾ...?*

ಮಾರ್ ಮತ್ತು ರನ್ ಇರುವುದರಿಂದ ಹೊಡೆಯುವುದು, ಓಡುವುದರಲ್ಲೇ ಆಸಕ್ತಿಯಂತೆ!

ಲಕ್ಷ್ಮಿ ಎಸ್. ಮೆಳ್ಳಿಗೇರಿ, ಸಾಂಗಲಿ

*ತಾಯಿ ಮತ್ತು ಹೆಂಡತಿಯಲ್ಲಿರುವ ವ್ಯತ್ಯಾಸ ತಿಳಿಸಿರಿ...?*

ಕ್ಷಮಿಸಿ; ಇದಕ್ಕೆ ಉತ್ತರ ನೀಡಬೇಕಾದರೆ ಕೇವಲ ಪುಟವಲ್ಲ, ಇಡೀ ಸಂಚಿಕೆಯೂ ಸಾಲುವುದಿಲ್ಲ!

ಹಾಡ್ಯ ಜಯಾನಂದ, ಮೈಸೂರು

*ಹನಿಮೂನ್ : ಯಾರಿಟ್ಟರೀ ಹೆಸರು; ಯಾಕಿಟ್ಟರೀ ಹೆಸರು?*



ವಿವಾಹದಲ್ಲಿ ಸಿಹಿ ಮತ್ತು ಸುಂದರವಾದ ಕಾಲವೆಂದರೆ ಇದೊಂದೇ ಎಂದು ತಿಳಿದವರು!

ಗಣೇಶ ಎಂ. ಪೈ, ಚಿಕ್ಕಮಗಳೂರು

*ಅಂದು ಜಮೀನು, ಇಂದು ಜಾಮೀನು; ನಾಳೆ?*

ಪುನರಪಿ ಹನನಂ, ಪುನರಪಿ ಹರಣಂ, ಪುನರಪಿ ಪರಪ್ಪ ಜೈಲೇ ಶಯನಂ!

ಅರ್. ಮಧುಸೂದನ್, ಹಾಸನ

*ಚುಂಬಿಸಿದ ಕೂಡಲೆ ಅವಳು ಉಳಿದ ಭಾಗ ಬ್ರೇಕ್‌ನ ನಂತರ ಅಂತಾಳಲ್ಲಾ...?*

ಚುಂಬನವಾದ ನಂತರ ದಂತಭಗ್ನವಾಗಬೇಕಲ್ಲ... ಬ್ರೇಕ್ ಆಗುವುದು ನಿಮ್ಮ ಹಲ್ಲೇ ಅಂತೆ!

ಎಚ್.ಆನಂದಕುಮಾರ್, ಚಿತ್ರದುರ್ಗ

*ಮಿಸ್ಟರ್ ರಾಮ್, ನಿಮ್ಮದು ರಾಮ ರಾಮ ಎನ್ನುವ ವಯಸ್ಸೋ ಅಥವಾ ಕೃಷ್ಣ ಕೃಷ್ಣ ಎನ್ನುವ ಮನಸ್ಸೋ?*

ಸೀತೆಯನ್ನು ಹುಡುಕುವ ವಯಸ್ಸು, ರಾಧೆಯನ್ನು ನೆನೆಸುವ ಮನಸ್ಸು!

ಡಿ.ಎಲ್.ಚಂದ್ರಿಕಾ, ಚನ್ನಗಿರಿ

*ಪ್ರಶಸ್ತಿಗಳ ಆಯ್ಕೆಗೆ ಸಾಹಿತ್ಯ ಶ್ರೇಷ್ಠತೆ ಮಾನದಂಡ ಅಲ್ಲವೇ?*

ಹೌದು; ಸಾಹಿತ್ಯ, ಶ್ರೇಷ್ಠತೆ, ಮಾನ ಎಲ್ಲವೂ ದಂಡ!

ವಿದ್ಯಾ ನಾಗ್, ಬೆಂಗಳೂರು

*ಹೆಂಡತಿಗೂ, ಗೂಢಚಾರಿಣಿಗೂ ಏನು ವ್ಯತ್ಯಾಸ?*

ಗೂಢಚಾರಿಣಿ ಗೋಪ್ಯತೆಯನ್ನು ಮಾತ್ರ ಜಾಲಾಡುತ್ತಾಳೆ, ಹೆಂಡತಿ ಇಡೀ ಜನ್ಮವನ್ನೇ ಜಾಲಾಡುತ್ತಾಳೆ.

ಕೆ.ವಿ.ಶಿವಕುಮಾರ್ ಕಾಳಿಹುಂಡಿ, ಮೈಸೂರು

*ಪ್ರೀತಿಸುವಾಗ ಇರುವ ಲವಲವಿಕೆ ಮದುವೆಯಾದ ನಂತರ ಇರುವುದಿಲ್ಲವಲ್ಲಾ...?*

ಸರಿಯೇ; ಲವ್ ಇದ್ದಾಗ ಲವಲವಿಕೆ, ವರಿಸಿದ ನಂತರ worry!

ಕಂಡಕ್ಟರ್ ರಾಜು, ಗುಬ್ಬಿ

*ಡಾ. ಛಬ್ಬಿಯವರ ಉತ್ತರ ಓದಿದಾಗ ನಿಮಗೆ ರೋಮಾಂಚನವಾಗತ್ತಾ?*

ಛೆ! ಪ್ರಯೋಜನವಾಗಲೆಂದು ಕೊಟ್ಟ ಉತ್ತರಗಳನ್ನು ಪ್ರಚೋದಕವೆಂದು ಪರಿಗಣಿಸುವುದು ರೈಟ್ ಅಲ್ಲ ಕಂಡಕ್ಟರ್!

ಡಿ.ಕೆ.ರಾಜ್, ಗದಗ

*ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ಯಾಕೆ?*

ಹಿತವಾದ, ಸಿಹಿಯಾದ ರುಚಿಗೆ ದಾಸರಾಗುವುದಕ್ಕೆ!

ಮುರಲೀಧರ ಕುಲಕರ್ಣಿ, ಬೀದರ್

*ಜೈಲಿನಿಂದ ಹೊರಬಂದವರಿಗೆ ಅದ್ದೂರಿಯಾದ ಸ್ವಾಗತ ನೀಡಲಾಗುತ್ತಿದೆಯಲ್ಲಾ, ಇದು ಸರಿಯೆ?*

ಕಳ್ಳರ ಗುಂಪು ಕಳ್ಳರನ್ನು ಹೇಗಾದರೂ ಸ್ವಾಗತಿಸಲಿ, ಅದನ್ನು ಸುದ್ದಿ ಎಂದು ಬಿಂಬಿಸುವುದು ಶುದ್ಧ ಅವಿವೇಕ.

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಹೆಂಡ್ತಿ ಅಂದ್ರೆ ಡಿಮ್ಯಾಂಡ್ ಡ್ರಾಫ್ಟ್, ಪ್ರೇಯಸಿ ಅಂದ್ರೆ ಚೆಕ್ ಇದ್ದಂಗೆ ಎನ್ನುವರು, ಏಕೆ?*

ಚೆಕ್ ನಮ್ಮ ಅಕೌಂಟ್‌ಗೆ ದಾಖಲಾಗದೆ ಬೌನ್ಸ್ ಆಗುವ ಸಾಧ್ಯತೆ ಇರುವುದರಿಂದ!

ವಿ.ಹಮೀದ್, ವಿಟ್ಲ

*ವಿವಾಹಿತೆಗೆ ತಾಳಿಯೇ ಮುಖ್ಯ; ಪ್ರೇಯಸಿಗೆ?*

ಪ್ರಿಯಕರ ಕೊಡಿಸಿದ ಗಿಫ್ಟ್‌ಗಳ ಟ್ರಾಲಿಯೇ ಮುಖ್ಯ!

ಜಾಕೋಬ್ ಡಿಸೋಜ, ಕುರುವಳ್ಳಿ

*ಮನಸ್ಸಿಗೆ ಹತ್ತಿರವಾದವರನ್ನು ಕಳೆದುಕೊಂಡೆ, ಮುಂದೆ?*

ಹತ್ತಿರ ಇರುವವರನ್ನೇ ಮನಸ್ಸಿಗೆ ತಂದುಕೊಳ್ಳಿ.

ಎಂ.ಎನ್. ಸೋಮಶೇಖರ್, ಮೈಸೂರು

*ರಾಮ್‌ಜೀ, ನಿಮ್ಮ ನಿವಾಸದೆದುರು ಒಂದು ಕಾಲೇಜ್ ಗರ್ಲ್ಸ್ ಹಾಸ್ಟೆಲ್ ಇದ್ದಿದ್ದರೆ....?*

ಮನೆಯನ್ನೇ ಬ್ಯೂಟಿ ಪಾರ್ಲರ್ ಆಗಿಸಿ ಝುಂ ಎಂದಿರಬಹುದಿತ್ತು!

ಎಂ.ಆರ್. ಪವನ್ ಕುಮಾರ್, ಬಳ್ಳಾರಿ

*ದೇವರು ಒಬ್ಬನೇ ಆದರೂ ಧರ್ಮಗಳು ಬಹಳ ಏಕೆ?*




ಊರು ಒಂದೇ ಆದರೂ ಮಾರ್ಗಗಳು ಅನೇಕವಿದ್ದಂತೆ!

ಪಿ.ಜೆ. ರಾಘವೇಂದ್ರ, ಮೈಸೂರು

*ಗಾಂಧಿಜಯಂತಿಯಂದು ತುಂಡು ಬಟ್ಟೆ ಧರಿಸುವುದನ್ನು ಕಡ್ಡಾಯಗೊಳಿಸಿದರೆ ಹೇಗೆ?*

ಹಾಗಾದರೆ ಮಕ್ಕಳ ದಿನಾಚರಣೆಯಂದು ಎಲ್ಲರನ್ನೂ ತೊಟ್ಟಿಲಿಗೆ ಹಾಕಬೇಕೇನು?

ಆರ್, ವಿಜಯಲಕ್ಷ್ಮಿ, ಕೊಳ್ಳೇಗಾಲ

*ಲೋಕಾಯುಕ್ತ ಹುದ್ದೆಯನ್ನು ಅಲಂಕರಿಸಲು ಏಕೆ ಮಹಾವ್ಯಕ್ತಿಗಳು ಹಿಂಜರಿಯುತ್ತಿದ್ದಾರೆ?*

ಈಗಿನ ಕೊಳ್ಳೇಕಾಲದಲ್ಲಿ ಅಲ್ಲಿ ಡಿಪಾರ್ಟ್‌ಮೆಂಟಲ್ ಹೆಡ್ ಆದರೆ ಮೆಂಟಲ್, ಹೆಡ್ಡ ಆಗುವ ಸಾಧ್ಯತೆ ಇರುವುದರಿಂದ!

■ ರಾಮ್